ಓ.ಎಸ್.ನಂ.30/2024

ಡಿ ಡಬ್ಲ್ಯೂಃ 1

ದಿನಾಂಕ 12.08.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ನಿಡಿ-10 ರಲ್ಲಿ ಕಾಣಿಸಿರುವ ಹೆಸರಿನ ವ್ಯಕ್ತಿಗಳ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ಹನುಮಪ್ಪ ಜಮಾಲಪ್ಪ ಐಜ್ಜೇನವರ ನನ್ನ ಅಜ್ಜನಾಗಿರುತ್ತಾರೆ. ಉಳಿದ ವ್ಯಕ್ತಿಗಳೂ ಸಹ ಸದರಿ ಆಸ್ತಿಯ ಮೂಲ ಮಾಲೀಕರು ಎಂದರೆ ಸರಿ. ಸದರಿ ಆಸ್ತಿಯಲ್ಲಿ ನನ್ನ ಅಜ್ಜ ಹನುಮಪ್ಪನಿಗೆ ಹಕ್ಕುಬಿಟ್ಟುಕೊಟ್ಟಿರುವ ಕುರಿತು ದಾಖಲೆ ಇದ್ದು ನಾನು ಹಾಜರುಪಡಿಸಿರುತ್ತೇನೆ. ಆ ರೀತಿ ಹಕ್ಕು ಬಿಟ್ಟುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳು ಯಡಚಿ ಕುಟುಂಬಸ್ಥರು ಎಂದರೆ ಸರಿ. ಸದರಿ ವಾದಿಯರು ಚಿಕ್ಕಪ್ಪ ಯಡಚಿ ವಾರಸುದಾರರು ಎಂದರೆ ನನಗೆ ಗೊತ್ತಿಲ್ಲ. 5 ರಿಂದ 9 ನೇ ವಾದಿಯರು ಮತ್ತು 6 ರಿಂದ 8 ನೇ ಪ್ರತಿವಾದಿಗಳು ಹಾಲಪ್ಪ ಯಡಚಿ ವಾರಸುದದಾರು ಎಂದರೆ ನನಗೆ ಗೊತ್ತಿಲ್ಲ. 10 ರಿಂದ 13 ನೇ ವಾದಿಗಳು ಮತ್ತು 10 ರಿಂದ 13 ನೇ ಪ್ರತಿವಾದಿಗಳು ನಾಗಪ್ಪ ಯಡಚಿ ವಾರಸುದಾರರು ಎಂದರೆ ನನಗೆ ಗೊತ್ತಿಲ್ಲ.

**2.** ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ 13 ಮತ್ತು 14 ನೇ ವಾದಿಯರು ಮತ್ತು 10 ರಿಂದ 13 ನೇ ಪ್ರತಿವಾದಿಗಳು ನಾಗಪ್ಪ ಐಜ್ಜೇನವರ ಕುಟುಂಬಸ್ಥರು ಅಲ್ಲಾ ಎಂದರೆ ಸರಿ. ದಾವಾ ಆಸ್ತಿಗೆ 2 ರಿಂದ 5 ನೇ ಪ್ರತಿವಾದಿಗಳ ಹೆಸರನ್ನು ಹಚ್ಚಿಕೊಂಡಿರುತ್ತೇವೆ. ಅದಕ್ಕೂ ಪೂರ್ವದಲ್ಲಿ 1 ನೇ ಪ್ರತಿವಾದಿಯ ಹೆಸರು ಇತ್ತು ಎಂದರೆ ಸರಿ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವಂತೆ 1 ನೇ ಪ್ರತಿವಾದಿಯ ಉಳಿದ ವಾರಸುದಾರರ ಹೆಸರನ್ನು ದಾವಾ ಆಸ್ತಿಯ ದಾಖಲೆಯಲ್ಲಿ ಹಚ್ಚಿಕೊಂಡಿರುವುದಿಲ್ಲ ಎಂದರೆ ಸರಿ. ನಾವು 5 ಜನ ಪ್ರತಿವಾದಿಗಳು ಹರಕತ್ತು ಮಾಡಿದ ಕಾರಣ ಈ ದಾವೆ ಹೂಡಲಾಗಿದೆ ಎಂದರೆ ಸರಿಯಲ್ಲ.

**3.** ದಾವಾ ಆಸ್ತಿಯನ್ನು 1957 ನೇ ಸಾಲಿನಲ್ಲಿ ವಾದಿಗಳ ಮತ್ತು 6 ರಿಂದ 13 ನೇ ಪ್ರತಿವಾದಿಗಳ ಮೂಲ ವಾರಸುದಾರರಿಗೆ ನೊಂದಾಯಿತ ಕ್ರಯ ಪತ್ರದ ಮೂಲಕ ಖರೀದಿಗೆ ನೀಡಲಾಗಿದೆ ಎಂದರೆ ಸರಿಯಲ್ಲ. ಅಂದಿನಿಂದ ಸದರಿ ಖರೀದಿದಾರರ ಕಬ್ಜಾದಲ್ಲಿ ದಾವಾ ಆಸ್ತಿ ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾವು ಎಂದಿಗೂ ಕಬ್ಜಾದಲ್ಲಿ ಇಲ್ಲ ಎಂದರೆ ಸರಿಯಲ್ಲ. ಖರೀದಿ ಪತ್ರ ಆದರೂ ಸಹ ಸಿಟಿಎಸ್ ದಾಖಲೆಗಳಲ್ಲಿ ಖರೀದಿದಾರರ ಹೆಸರು ನೊಂದಣಿ ಆಗಿರಲಿಲ್ಲ ಎಂದರೆ ಸರಿ. ಸದರಿ ವಿಷಯವನ್ನು ದುರುಪಯೋಗಪಡಿಸಿಕೊಂಡು ನಿಡಿ-10 ರ ದಾಖಲೆ ನನ್ನ ಅಜ್ಜ ಸೃಷ್ಟಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಹೆಸರನ್ನು ಹಚ್ಚಿಕೊಳ್ಳಲು ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ.

**4.** ನನ್ನ ತಂದೆಯೂ ಸಹ ಸುಳ್ಳು ಮಾಹಿತಿ ಆಧಾರದ ಮೇಲೆ ದಾವಾ ಆಸ್ತಿ ತನ್ನ ಹೆಸರಿಗೆ ಹಚ್ಚಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ 2 ರಿಂದ 5 ನೇ ಪ್ರತಿವಾದಿಗಳ ಹೆಸರಿಗೆ ವರ್ಗಾಯಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವರ್ಗಾವಣೆ ಕುರಿತು ವಾದಿಗಳು ತಕರಾರು ಸಲ್ಲಿಸಿದ್ದರು ಎಂದರೆ ಸರಿ. ಸದರಿ ತಕರಾರು ತಿರಸ್ಕೃತಗೊಂಡು ನಮ್ಮ ಪರವಾಗಿ ಆದೇಶವಾಗಿರುತ್ತದೆ ಎಂದರೆ ಸರಿ. ಆ ಸಮಯದಲ್ಲಿ ನಾವು ವಾದಿಗಳ ಕಬ್ಜಾಕ್ಕೆ ತಕರಾರು ಮಾಡಿದ ಕಾರಣ ಓ.ಎಸ್. ನಂಬರಃ 337/2023 ರ ದಾವೆ ಹೂಡಿದ್ದರು ಎಂದರೆ ಸರಿಯಲ್ಲ. ನಂತರ ಮಾಲೀಕತ್ವದ ಕುರಿತು ಈ ದಾವೆ ಹೂಡಲಾಗಿದೆ ಎಂದರೆ ಸಾಕ್ಷಿ ಯಾವುದೇ ಉತ್ತರ ನಿಡಿರುವುದಿಲ್ಲ.

**5.** ನಿಪಿ–16 ರಿಂದ 24 ರ ದಾಖಲೆಗಳು ದಾವಾ ಆಸ್ತಿಗೆ ಸಂಬಂಧಿಸಿರುತ್ತವೆ ಎಂದರೆ ಸರಿಯಲ್ಲ. ನಿಪಿ–22 ರ ದಾಖಲೆಯು ಕಾನೂನುಬದ್ಧವಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿ ಕುಟುಂಬಸ್ಥರು 3 ಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಆ ಕಾರಣ 3 ಪ್ರತ್ಯೇಕ ವಿದ್ಯುತ್ ಮೀಟರ್ ಅಳವಡಿಸಿಕೊಂಡು ಬಿಲ್ ಪಾವತಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನಾವು 2020 ರಿಂದ ದಾವಾ ಆಸ್ತಿಯ ಕುರಿತು ಕರ ಪಾವತಿ ಮಾಡಿರುತ್ತೇವೆ. ಅದಕ್ಕೂ ಪುರ್ವದಲ್ಲಿ ಕರ ಪಾವತಿ ಮಾಡಲು ನಮಗೆ ಯಾವುದೇ ತೊಂದರೆ ಇರಲಿಲ್ಲ. ನಮ್ಮ ಕಬ್ಜಾದಲ್ಲಿ ದಾವಾ ಆಸ್ತಿ ಇಲ್ಲದ ಕಾರಣ ಕರ ಪಾವತಿ ಮಾಡಿರಲಿಲ್ಲ ಎಂದರೆ ಸರಿಯಲ್ಲ.

**6.** ನಿಡಿ–14 ರಿಂದ 37 ರ ದಾಖಲೆಗಳಲ್ಲಿ ದಾವಾ ಆಸ್ತಿಯ ವಿಸ್ತೀರ್ಣ 144 ಚದರ ಅಡಿ ಎಂದು ಕಾಣಿಸಲಾಗಿದೆ ಎಂದರೆ ಸರಿ. ದಾವಾ ಆಸ್ತಿಯ ಮೂಲ ವಿಸ್ತೀರ್ಣ 432 ಚದರ ಅಡಿ ಇದೆ ಎಂದರೆ ಸರಿ. ನಮಗೆ ದಾವಾ ಆಸ್ತಿಯ ಅಳತೆ ಗೊತ್ತಿಲ್ಲದ ಕಾರಣ ಅಂದಾಜು ಅಳತೆ ತೋರಿಸಿ ಕರ ಪಾವತಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಇಂದಿಗೂ ಸಹ ದಾವಾ ಆಸ್ತಿಯಲ್ಲಿ ವಾದಿಗಳು ಮತ್ತು 6 ರಿಂದ 14 ನೇ ಪ್ರತಿವಾದಿಗಳು ಮಾಲ್ಕೀ ನಾತೆಯಿಂದ ಕಬ್ಜಾ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿಯಲ್ಲಿ ಎಂದಿಗೂ ಕಬ್ಜಾ ಇಲ್ಲ ಎಂದರೆ ಸರಿಯಲ್ಲ. ನಾವು ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು.

ನನ್ನ ಸಮಕ್ಷಮ

Sd/-

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.